ಅ. ನೆಲಮಂಗಲ ತಾಲ್ಲೂಕಿಗೆ ಪ್ರತಿ ತಿಂಗಳು ಅಗತ್ಯವಿರುವ ಸಕ್ಕರೆ, ಗೋಧಿ ಪಾಮಾಯಿಲ್, ಸೀಮೆಎಣ್ಣೆ ಇನ್ನೂ ಮುಂತಾದ ಅಗತ್ಯ ಪಡಿತರ ವಸ್ತುಗಳ ಪ್ರಮಾಣವೆಷ್ಟು ?

ಆ. ತಾಲ್ಲೂಕಿನಲ್ಲಿ ಅವಶ್ಯಕತೆ ಇರುವಷ್ಟು ಪಡಿತರ ವಸ್ತುಗಳನ್ನು . ಪ್ರತಿ ತಿಂಗಳು ವಿತರಿಸಲಾಗುತ್ತಿದೆಯೇ ?

ಇ. ಈ ವಿತರಣೆಯಲ್ಲಿ ಪ್ರತಿ ತಿಂಗಳು ಖೋತಾ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ. ಹಾಗಿದ್ದಲ್ಲಿ, ಆ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):–

ಅ. ವಿವರಗಳು ಈ ಕೆಳಕಂಡಂತೆ ಇರುತ್ತವೆ.

ಅಕ್ಕಿ	1403 ಕ್ವಿಂಟಾಲ್
ಗೋಧಿ	1158 ಕ್ವಿಂಟಾಲ್
ಸಕ್ಕರೆ	543 ಕ್ವಿಂಟಾಲ್
ಸೀಮೆಎಣ್ಣೆ	163 ಕೆ.ಎಲ್.
ಪಾಮಾಯಿಲ್	–

ಆ. ಜನವರಿ ಮಾಹೆಯಲ್ಲಿ ವಿತರಣೆಗೆ ಬಿಡುಗಡೆ ಮಾಡಲಾದ ಪಡಿತರ ಪ್ರಮಾಣ ಈ ಕೆಳಗಿನಂತಿದೆ.

ಅಕ್ಕಿ	1169 ಕ್ವಿಂಟಾಲ್
ಗೋಧಿ	807 ಕ್ವಿಂಟಾಲ್
ಸಕ್ಕರೆ	499 ಕ್ವಿಂಟಾಲ್
ಸೀಮೆಎಣ್ಣೆ	108 ಕೆ. ಎಲ್.

ಇ. ಹೌದು. ಈ ನಿತರಣೆಯು ಪ್ರತಿ ತಿಂಗಳು ಕೇಂದ್ರ ಸರ್ಕಾರವು ರಾಜ್ಯಕ್ಕೆ ಹಂಚಿಕೆ ಮಾಡುವ ಪ್ರಮಾಣವನ್ನು ಅವಲಂಬಿಸಿದೆ.

ಈ. ಸಕ್ಕರೆ ಮತ್ತು ಸೀಮೆಎಣ್ಣೆ ಮತ್ತು ಇತರ ಪಡಿತರ ವಸ್ತುಗಳ ಹಂಚಿಕೆಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರವನ್ನು ಮೇಲಿಂದ ಮೇಲೆ ಕೋರಲಾಗಿದೆ.

ಚುಂಜಿ ಫಾಲ್ಸ್ ಅಭಿವೃದ್ಧಿ

565 (1283): ಶ್ರೀ ಡಿ. ಕೆ. ಶಿವಕುಮಾರ್ (ಸಾತನೂರು):–

ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕನಕಪುರ ತಾಲ್ಲೂಕಿನಲ್ಲಿ ಪ್ರವಾಸೋದ್ಯಮ ಕೇಂದ್ರವೆನಿಸಿದ ಚುಂಜಿ ಫಾಲ್ಸ್ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ. ಹಾಗಿದ್ದಲ್ಲಿ, ಅದರ ಅಭಿವೃದ್ಧಿಗೆ ಸರ್ಕಾರ ಏನು ಯೋಜನೆ ರೂಪಿಸಿಕೊಂಡಿದೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು)

ಅ. ಹೌದು.

ಆ. ಈ ಸ್ಥಳದ ಅಭಿವೃದ್ಧಿಗೆ ಯೋಜನೆ ರೂಪಿಸಿಕೊಂಡಿಲ್ಲ.

ಹೈಕೋರ್ಟ್ ಪೀಠ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಸ್ಥಾಪನೆ.

566 (1309) ಶ್ರೀ ಬಾಟಾಳ್ ನಾಗರಾಜ್ (ಚಾಮರಾಜನಗರ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಹೈಕೋರ್ಟ್ ಪೀಠವನ್ನು ಸ್ಥಾಪಿಸುವಂತೆ ಕೋರಿ ಯಾವ ಯಾವ ಜಿಲ್ಲೆಗಳಿಂದ ಮನವಿ ಬಂದಿವೆ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):–

ಧಾರವಾಡ, ಗುಲ್ಬರ್ಗಾ, ಬೀದರ್, ಬೆಳಗಾವಿ, ವಿಜಾಪುರ, ದಕ್ಷಿಣ ಕನ್ನಡ, ರಾಯಚೂರು ಜಿಲ್ಲೆಗಳಿಂದ ಹೈಕೋರ್ಟ್ ಪೀಠವನ್ನು ಸ್ಥಾಪಿಸುವಂತೆ ಕೋರಿ ಮನವಿ ಬಂದಿವೆ.

ಶಹಾಪುರದಲ್ಲಿ ರಸ್ತೆ ಸಾರಿಗೆ ಸಂಸ್ಥೆ ಡಿಪೋ.

567 (1329): ಶ್ರೀ ಶಿವಶೇಖರಪ್ಪಗೌಡ ಶಿರವಾಳ, (ಶಹಾಪುರ)

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಗುಲ್ಬರ್ಗ ಜಿಲ್ಲೆಯ ಶಹಾಪುರದಲ್ಲಿನ ಕ. ರಾ. ರ. ಸಾ. ಸಂಸ್ಥೆ ಡಿಪೋದಲ್ಲಿನ ಬಸ್‌ಗಳ ಸಂಖ್ಯೆ : ಎಷ್ಟು:

ಆ. ಈ ಪೈಕಿ ಎಷ್ಟು ಬಸ್‌ಗಳು ಚಾಲ್ತಿಯಲ್ಲಿ ಇರುತ್ತವೆ ?

ಇ. ಡಿಪೋಗೆ ಬರುತ್ತಿರುವ ಪ್ರತಿ ತಿಂಗಳ ಆದಾಯವೆಷ್ಟು ?

ಈ. ಎಷ್ಟು ತಿಂಗಳಿಂದ ನಷ್ಟ ಅನುಭವಿಸುತ್ತಿದೆ ?

ಉ. ಇತ್ತೀಚೆಗೆ ಬಸ್ ದರ ಹೆಚ್ಚಿಸಿದ ನಂತರ ಬರುತ್ತಿರುವ ಆದಾಯವೆಷ್ಟು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ. ದಿನಾಂಕ: 24.2.93ಕ್ಕೆ ಶಹಾಪುರ ಘಟಕದಲ್ಲಿ 76 ಬಸ್‌ಗಳು ಇರುತ್ತವೆ.

ಆ. 70 ಬಸ್‌ಗಳು ಚಾಲ್ತಿಯಲ್ಲಿರುತ್ತವೆ.

ಇ. ಏಪ್ರಿಲ್‌ನಿಂದ ಡಿಸೆಂಬರ್ 92ರವರೆಗಿನ ತಿಂಗಳುವಾರು ಸಾರಿಗೆ ಆದಾಯವು (ಟ್ರಾಫಿಕ್ ರೆವಿನ್ಯು) ಈ ಕೆಳಕಂಡಂತಿವೆ.

ಏಪ್ರಿಲ್	31.74 ಲಕ್ಷ ರೂ.ಗಳು
ಮೇ	31.88 ಲಕ್ಷ ರೂ.ಗಳು
ಜೂನ್	27.78 ಲಕ್ಷ ರೂ.ಗಳು
ಜುಲೈ	29.68 ಲಕ್ಷ ರೂ.ಗಳು